ಇಲಾಖೆ ಇಲ್ಲೇನಾದರೂ ಬಂದೋಬಸ್ತ್ ಏರ್ಪಡಿಸುವುದು, ಆ ಕಡೆಗೆ ಸೂಕ್ಷ್ಮವಾದಂತಹ ಕ್ರಮ ತೆಗೆದುಕೊಳ್ಳುವುದು, ಕಟ್ಟೆಚ್ಚರ ವಹಿಸುವಂಥಾದ್ದು ಮಾಡುತ್ತಿದೆಯೇ? ಏಕೆಂದರೆ, ಇಡೀ ದೇಶದಲ್ಲಿ ಒಂದು alert ಮಾಡುತ್ತಿರುವಂತಹ ಸಂದರ್ಭದಲ್ಲಿ ಎಲ್ಲಿ ಏನು ಬೇಕಾದರೂ ಘಟನೆಗಳು ಆಗಬಹುದು ಎನ್ನುವಂಥಹ ಸಂದರ್ಭ ಇರುವಂಥಹ ಸಮಯದಲ್ಲಿ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸುವಂಥಹ ಪ್ರಯತ್ನಗಳನ್ನೇನಾದರೂ ಮಾಡುತ್ತಿದ್ದಾರೆಯೇ? ಈ ದೇಶದ್ರೋಹಿ ಚಟುವಟಿಕೆಗಳಿಗೆ ಅವಕಾಶವಾಗದಂತೆ, ಇಲ್ಲೇನು ಹತ್ತು ಸಾವಿರಕ್ಕೂ ಹೆಚ್ಚು ಜನ ವಿದೇಶೀಯರು ಇಲ್ಲಿ ಬಂದು ನೆಲೆಸಿದ್ದಾರೆ ಎನ್ನುವಂಥಹ ವಾತಾವರಣ ಇಲ್ಲಿ ಇರಬೇಕಾದರೆ, ಇಲ್ಲೂ ಸಹ ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಉಡುಪಿ, ಮಂಗಳೂರು ಮತ್ತು ಕಾರವಾರ ಇಲ್ಲೆಲ್ಲಾ ಕಟ್ಟೆಚ್ಚರ ವಹಿಸಬೇಕೆಂದು ಸೂಚನೆ ಕೊಡಬೇಕಾಗಿದೆ. ಸರ್ಕಾರ ಈ ದಿಸೆಯಲ್ಲಿ ಏನಾದರೂ ಕ್ರಮ ತೆಗೆದುಕೊಂಡಿದೆಯೇ? ಇಲ್ಲಿ ಏನಾಗಿದೆ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎನ್ನುವುದನ್ನು ತಾವು ಹೇಳಬೇಕು, ಅದಕ್ಕಾಗಿ, ಇದನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಆ) ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಮಂಡನೆ ಚರ್ಚೆ ಪೂರ್ತಿಯಾಗಿಲ್ಲ ಮತ್ತು ಸರ್ಕಾರ ಸ್ಪಷ್ಟ ಭರವಸೆಯನ್ನು ನೀಡಬೇಕು ಎನ್ನುವುದರ ಬಗ್ಗೆ:

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, adjournment motion ಇನ್ನೂ conclude ಆಗಿಲ್ಲ. ಮಾನ್ಯ ಯಡಿಯೂರಪ್ಪನವರೆ, ತಾವು ಅದರ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ಭಾವಿಸಿ ನಾವು ಸುಮ್ಮನೆ ಕುಳಿತುಕೊಂಡಿದ್ದೆವು. ಕುಡಿಯುವ ನೀರಿಗೆ ಶಾಶ್ವತವಾದ ಸಮಿತಿ ಮಾಡಬೇಕು ಎಂದು ಕೇಳಿದ್ದೆವು. ಅದು ಏನಾಯಿತು?

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ಚರ್ಚೆಯಾಗಿ ಇನ್ನೂ ಮುಗಿಯಲಿಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅದಿನ್ನೂ ಮುಗಿದಿಲ್ಲ ಸಾರ್. ಅದಕ್ಕೆ ಸರ್ಕಾರದವರು ಉತ್ತರ ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್: ಆ ನಿರ್ಣಯ ಏನಾಯಿತು ಎಂದು ಸರ್ಕಾರದವರು ಹೇಳಲಿಲ್ಲ.

ಅಧ್ಯಕ್ಷರು: ಅದು ಮುಗಿಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದು ಮುಗಿಯಿತು ಎಂದು ಮಾನ್ಯ ಅಧ್ಯಕ್ಷರು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದೇನು ತೀರ್ಮಾನವಾಯಿತು ಸಾರ್. ಅದರ ಬಗ್ಗೆ ನಮಗೇನೂ ಗೊತ್ತಿಲ್ಲ. ಮಧ್ಯೆ House adjourn ಆಯಿತು ಸಾರ್.

ಅಧ್ಯಕ್ಷರು: ಈಗ adjournment motion ಅಡಿಯಲ್ಲಿ ನೀವು ಪ್ರಮುಖವಾಗಿ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಿರಿ. MLA ಅಧ್ಯಕ್ಷತೆಯ Task Force ಅನ್ನು ಮುಂದುವರೆಸಬೇಕು, ಎಂಬುದೊಂದು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಾತ್ಕಾಲಿಕವಾಗಿ, ಇಷ್ಟು ದಿನ ಎಂದು ಹೇಳಲಿ, ಆ ಪ್ರಶ್ನೆ ಬೇರೆ, ಅದಕ್ಕೆ ಅವರು ಉತ್ತರ ಕೊಟ್ಟರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದಕ್ಕೆ ನಾವು ಒಪ್ಪುವುಲಿಲ್ಲ ಸಾರ್.

ಅಧ್ಯಕ್ಷರು: ನೀವು ಅದನ್ನು ಒಪ್ಪಲಿ ಒಪ್ಪದಿರಲಿ, ದಯಮಾಡಿ ನಾನು ಹೇಳುವುದನ್ನು ಕೇಳಿ. ಎರಡನೆಯದಾಗಿ, ಏನು ಇಲ್ಲಿಯವರೆಗೆ ಬೇಕಾದಷ್ಟು ಕೆಲಸಗಳು ಆಗಿವೆಯೋ, ಅದ ಹಣ ಬಿಡುಗಡೆಯಾಗಿಲ್ಲ. ಎಂದು ಪ್ರಸ್ತಾಪ ಮಾಡಿದ್ದಿರಿ. ಅದಕ್ಕೆ ಮಾನ್ಯ ಕುಡಿಯುವ ನೀರು ಸಚಿವರು ಮಾತನಾಡಿ, ಎಷ್ಟು ಬೇಕಾದರೂ ದುಡ್ಡಿಗೆ ಕೊರತೆ ಇಲ್ಲ, ನಾವು ದುಡ್ಡನ್ನು ಇಷ್ಟು ಬಿಡುಗಡೆ ಮಾಡಿದ್ದೇವೆ, ಉಳಿದಿದ್ದನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ನಿಮಗೆ ಇನ್ನೇನಾಗಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ: ದುಡ್ಡನ್ನು ಕೊಟ್ಟಿಲ್ಲವಲ್ಲಾ ಸಾರ್, ಅದರ ಬಗ್ಗೆ ಅವರೇನಾದರೂ ನಮಗೆ ಮಾಹಿತಿ ಕೊಡಬೇಕಲ್ಲವೇ?

ಅಧ್ಯಕ್ಷರು: ಕೊಡುತ್ತೇವೆ ಎಂದು ಹೇಳಿದ್ದಾರೆ. ಅದು conclude ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ: ಖಂಡಿತವಾಗಿಯೂ, ಒಂದು ರೂಪಾಯಿ ಸಹ ಕೊಟ್ಟಿಲ್ಲ ಸಾರ್.

ಅಧ್ಯಕ್ಷರು: adjournment motion ಮೇಲೆ ದಿನಗಟ್ಟಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.....

ಶ್ರೀ ಜೆ.ಸಿ. ಮಾಧುಸ್ವಾಮಿ: ದಿನವೆಲ್ಲಾ ಚರ್ಚೆ ಮಾಡುವುದಿಲ್ಲ ಎನ್ನುವುದಾದರೆ ನಾವ್ಯಾಕೆ ಇಲ್ಲಿ ಮಾತನಾಡಬೇಕು ಸಾರ್? ಒಂದು ರೂಪಾಯಿ ದುಡ್ಡುಕೊಟ್ಟಿಲ್ಲವೆಂದು ನಾವು ಹೇಳುತ್ತೇವೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅವರು ಹಣ ಕೊಟ್ಟಿಲ್ಲ. ಆದ್ದರಿಂದ ಅವರು ಹಣ ಕೊಡುವವರೆಗೂ ನಾವು ಇಲ್ಲಿ ಧರಣಿ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:– ಮೊದಲನೆಯದಾಗಿ, ನಾವು ಇಂತಿಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ನಮಗೆ ಹಣದ ಕೊರತೆ ಇಲ್ಲ ಎಂದು Hon'ble Minister has made a statement.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಖಂಡಿತವಾಗಿಯೂ ಹಣ ಕೊಟ್ಟಿಲ್ಲ. ಅವರು ಹಣ ಕೊಡುತ್ತೇವೆ ಎಂದು ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, Task Force ನಲ್ಲಿ ನಾವು ಮಾಡಿಸಿರುವಂತಹ ಕೆಲಸಗಳಿಗೆ ಅವರು ಒಂದು ರೂಪಾಯಿಯನ್ನೂ ಸಹ ಕೊಟ್ಟಿಲ್ಲ ಸಾರ್.

ಶ್ರೀ ವಾಟಾಳ್ ನಾಗರಾಜ್: ನಾವು ಸಾಲಗಾರರಾಗಿದ್ದೇವೆ. ನಮ್ಮ ಹತ್ತಿರ ದುಡ್ಡಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲೂ ನಾವು ಕೊಳವೆ ಭಾವಿಗಳನ್ನು ಕೊರೆಸಿದ್ದೇವೆ. ಅವರಿಗೆ ಕೊಡುವುದಕ್ಕೆ ದುಡ್ಡಿಲ್ಲ. ಸರ್ಕಾರದವರು ಬರೀ ಬಡಾಯಿ ಮಾತು ಹೇಳುತ್ತಿದ್ದಾರೆಯೇ ಹೊರತು, ಸರ್ಕಾರದ ಹತ್ತಿರ ಹಣ ಇಲ್ಲ. ಆದ್ದರಿಂದ ಹಣ ಬಿಡುಗಡೆ ಮಾಡುತ್ತೇವೆ ಎಂದು ಸರ್ಕಾರ ಹೇಳಬೇಕು.

Mr. Speaker: adjournment motion ಮೇಲಿನ ಚರ್ಚೆ ಮುಕ್ತಾಯವಾಗಿದೆ .

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲಾ ಸಾರ್. ಅವರು ಒಂದು ರೂಪಾಯಿ ಸಹ ನಮಗೆ ಕೊಡದಿದ್ದರೂ ಸಹ ನಾವು ಹೇಗೆ ಇದನ್ನು ಮುಕ್ತಾಯ ಗೊಳಿಸುವುದು? ಅವರು ಕೊಟ್ಟಿದ್ದೇವೆ ಎಂದು ಹೇಳಬೇಕು.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ, ಒಂದೇ ಒಂದು ಭರವಸೆ ಅವರಿಂದ ಬೇಕಾಗಿರುವಂಥಾದ್ದು ಏನೆಂದರೆ,.....

ಅಧ್ಯಕ್ಷರು: ಅದರ ಬಗ್ಗೆ ಬೆಳಿಗ್ಗೆ ಹೇಳಿದ್ದರಲ್ಲಾ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾನ್ಯ ಅಧ್ಯಕ್ಷರ ಪೀಠದ ಮುಂದೆ ನಿಂತು ಮಾತನಾಡುತ್ತಿದ್ದರು.)

ಅಧ್ಯಕ್ಷರು: ಮಾನ್ಯ ನಾಗರಾಜ್‌ರವರೆ ನಿಮ್ಮಂತಹ ಹಿರಿಯ ಸದಸ್ಯರು ದಯಮಾಡಿ ಸದನದ ಎಲ್ಲರಿಗೂ ಮಾರ್ಗದರ್ಶನ ಮಾಡಬೇಕು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಹಣ ಬಿಡುಗಡೆ ಮಾಡುತ್ತೇವೆ ಎಂದು ಅವರು ಹೇಳಲಿ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೇ, ಅವರು ಬೆಳಿಗ್ಗೆ ಏನು ಹೇಳಿದರು? ನೀವು ಕಿವಿ ಮುಚ್ಚಿಕೊಂಡು ಕುಳಿತಿದ್ದಿರಾ?

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಅದರ ಬಗ್ಗೆ ಹೇಳಲಿಲ್ಲ ಸಾರ್. ಅವರು ಖಂಡಿತವಾಗಿಯೂ ಹೇಳಿಲ್ಲ.

ಅಧ್ಯಕ್ಷರು: ಅವರು ಎಷ್ಟು ಬಿಡುಗಡೆ ಮಾಡಿದ್ದೇವೆ ಎಂಬುದನ್ನು ಹೇಳಿ, ಹಣಕ್ಕೆ ಏನೂ ಕೊರತೆ ಇಲ್ಲಾ, ಎಷ್ಟಾದರೂ ಕೆಲಸ ಆಗಲಿ, ಹಣ ಕೊಡಿಸತಕ್ಕಂಥದ್ದು ನಮ್ಮ ಜವಾಬ್ದಾರಿ ಎಂದು ಅವರು ಹೇಳಿದರು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ವಿ. ಶ್ರೀರಾಮರೆಡ್ಡಿಯವರು ಮಾನ್ಯ ಅಧ್ಯಕ್ಷರ ಪೀಠದ ಮುಂದೆ ನಿಂತು ಮಾತನಾಡುತ್ತಿದ್ದರು.)

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವೆಲ್ಲಾ ಇಲ್ಲಿ ಇದ್ದೆವು. ಹೌಸ್ adjourn ಆಯಿತು.

(ಗೊಂದಲ)

ಅಧ್ಯಕ್ಷರು: ತಾವು ಅಲ್ಲಿಗೆ ಹೋಗುವುದಾದರೆ ಹೋಗಿ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಮತ್ತು ಮಾನ್ಯ ಜಿ.ವಿ.ಶ್ರೀರಾಮರೆಡ್ಡಿಯವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಸಚಿವರೆ, ತಮ್ಮಲ್ಲಿ ನಮ್ಮದೊಂದೇ ವಿನಂತಿ. ನೀವು Task Force ಎಂದೇನು ರಚಿಸಿದ್ದಿರಿ, ಅದರ ವತಿಯಿಂದ ಅಲ್ಲಿ ಕೆಲಸಗಳನ್ನು ನಾವು ಮಾಡಿಸಿದ್ದೇವೆ, ಆದರೆ ಅಲ್ಲಿ ಬಿಲ್‌ಗಳು ಪಾವತಿ ಆಗಿಲ್ಲ. ಬೇರೆ ಬೇರೆ ಸ್ಕೀಮ್‌ಗಳಲ್ಲಿ ದುಡ್ಡು ಇರಬಹುದು. ಈ Task Force ಮೂಲಕ ಮಾಡಿಸಿರುವಂತಹ ಕೆಲಸಗಳಿಗೆ ಹಣವನ್ನು ಬಿಡುಗಡೆ ಮಾಡಿ, ಆ ಬಿಲ್ಲುಗಳನ್ನು ಚುಕ್ತಾ ಮಾಡುತ್ತೇವೆ ಎಂದು ನೀವು ಹೇಳಿದರೆ ಮುಗಿಯಿತು. ಮುಂದೆ ಮಾಡುವುದಕ್ಕೆ ಸಪರೇಟಾಗಿ ಹಣ ಕೊಡುತ್ತೇವೆ ಎಂದು ಹೇಳಿಬಿಡಿ.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಬರಗಾಲದ ಹಣ, ಕುಡಿಯುವ ನೀರಿಗೆ ಕೊಡತಕ್ಕಂಥ ಹಣ ಎಲ್ಲದರಲ್ಲೂ ಹೊಂದಿಸಿ ಅದನ್ನು ಎರಡು ತಿಂಗಳಿಗೋ, ಮೂರು ತಿಂಗಳಿಗೋ, ಒಂದೊಂದು ವರ್ಕ್ ಆದ 2-3 ತಿಂಗಳುಗಳಲ್ಲೇ ಅದನ್ನು ನಾವು ಕ್ಲಿಯರ್ ಮಾಡಿ ಕೊಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು: ಶ್ರೀ ರಾಮರೆಡ್ಡಿಯವರೆ, ಅಲ್ಲಿ ನಿಂತು ನೀವು ಮಾತನಾಡಬಾರದು. ಮಾನ್ಯ ಸಚಿವರೆ ನಾನು ಹೇಳುವುದನ್ನು ಕೇಳಿ, ಮಾನ್ಯ ಶಾಸಕರು ಟಾಸ್ಕ್ ಫೋರ್ಸ್ ವತಿಯಿಂದ ಕೆಲಸಗಳನ್ನು ಮಾಡಿಸಿದ್ದಾರೆ. ಈಗ ನಾವು ಸಾಲಗಾರರ ತರಹ ಆಗಿಬಿಟ್ಟಿದ್ದೇವೆ. ಅಲ್ಲಿ ಪೇಮೆಂಟ್ ಆಗಿಲ್ಲ ಎಂದು ಮಾನ್ಯ ಶಾಸಕರು ಹೇಳುತ್ತಿದ್ದಾರೆ. ಆ ಕೆಲಸಗಳಿಗೆಲ್ಲಾ ನೀವು ಪೇಮೆಂಟ್ ಮಾಡಿಸುತ್ತೀರೋ ಇಲ್ಲವೋ?

ಶ್ರೀ ಬಿ. ಸತ್ಯನಾರಾಯಣ: ಮಾಡಿಸುತ್ತೇವೆ.

ಅಧ್ಯಕ್ಷರು: ಅದರ ಬಗ್ಗೆ ತಾವು assurance ಕೊಡಿ. ಇಲ್ಲದಿದ್ದರೆ ನಾಳೆ ಇದು privilage ಆಗುತ್ತದೆ. Privilage ಆಗುತ್ತದೆಯಾದ್ದರಿಂದ ತಾವು ಯೋಚನೆ ಮಾಡಿ ಹೇಳಿ.

ಶ್ರೀ ಬಿ. ಸತ್ಯನಾರಾಯಣ: ಇದನ್ನು ಮಾಡೇ ಮಾಡಿಸುತ್ತೇವೆ.

ಅಧ್ಯಕ್ಷರು: ಮಾನ್ಯ ಸಚಿವರು ಅದಕ್ಕಿಂತ ಇನ್ನೇನು ಹೇಳುತ್ತಾರೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ದಯಮಾಡಿ ನಾವು ಹೇಳುವುದನ್ನು ಕೇಳಿ, ಟಾಸ್ಕ್‌ಫೋರ್ಸ್ ವತಿಯಿಂದ ಕೊರೆಸಿರತಕ್ಕಂಥದ್ದಕ್ಕೆ ಯಾವುದೇ CEO work Order ಅನ್ನು issue ಮಾಡಿಲ್ಲ. ಯಾವುದೇ CEO ಹಣ ಬಿಡುಗಡೆ ಮಾಡಿಲ್ಲ. ನಾವು ಇಲ್ಲಿ ಹುಡುಗಾಟಕ್ಕೆ ಮಾತನಾಡುತ್ತಿಲ್ಲ. ಒಬ್ಬೊಬ್ಬ ಶಾಸಕರು 80–90–100 ಬೋರ್‌ವೆಲ್‌ಗಳವರೆಗೆ ಹಾಕಿಸಿದ್ದೇವೆ. Zilla panchayathಗಳ chief Executive Officers work Orders ಕೊಟ್ಟಿಲ್ಲ. ಹಣವನ್ನೂ ಸಹ ಕೊಟ್ಟಿಲ್ಲ. ಬೋರ್‌ವೆಲ್ ತೆಗೆದಿರುವವರು ಒದ್ದಾಡುತ್ತಿದ್ದಾರೆ. ನಾವು ಹಣ ಕೊಟ್ಟಿದ್ದೇವೆ ಎಂದು ಅಸೆಂಬ್ಲಿಯಲ್ಲಿ ಹೇಳಿದ್ದಾರೆ. ಅದನ್ನು ನಮಗೆ ಕೊಡಿಸಿ ಎಂದು ಅವರುಗಳು ನಮಗೆ ಕೇಳಿದರೆ ಅದನ್ನು ಕೊರೆಸಿರುವ ನಮ್ಮಗಳ ಗತಿಯೇನು ಸಾರ್? ತಾವು ನಮ್ಮ ರಕ್ಷಣೆಗೆ ಬಾರದೆ ಹೋದರೆ, ನಾವು ಇನ್ನೆಲ್ಲಿಗೆ ಹೋಗಬೇಕು ಸಾರ್. ಇಲ್ಲಿ ದುಡ್ಡು ಕೊಡುತ್ತೇವೆ ಎಂದು ಹೇಳಿದ್ದರಿಂದ, ನಾವು ಅವರಿಗೆ ಹೇಳಿ ಬಾವಿಗಳನ್ನು ಕೊರೆಸಿದ್ದೆವು.

ಅಧ್ಯಕ್ಷರು: ಮಾನ್ಯ ಸಚಿವರು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ. ಅವರಿಗೆ ನೀವೇನು ಹೇಳುತ್ತಿದ್ದೀರೋ, ಅದೆಲ್ಲದರ ಮಾಹಿತಿ ಇದೆ. ಮಾಹಿತಿ ಇಲ್ಲದೆ ಅವರು ಮಾತನಾಡುತ್ತಾರೆಯೇ? ಅವರಲ್ಲಿ ಮಾಹಿತಿ ಇದೆ. ಆ ಮಾಹಿತಿ ಇಟ್ಟುಕೊಂಡೇ ಅವರೇನು ಹೇಳುತ್ತಿದ್ದಾರೆ ಎಂದರೆ.....

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರ ಮಾಹಿತಿಗಳನ್ನು ಇಟ್ಟುಕೊಂಡು ಇಲ್ಲಿ ಮಾತನಾಡಿದರೆ, ನಾವು ಇಲ್ಲಿ ಇರುವುದು ಏತಕ್ಕೆ ಸ್ವಾಮಿ?

ಅಧ್ಯಕ್ಷರು: ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದರು. ಬೇರೆ ಬೇರೆ ಹೆಡ್‌ನಲ್ಲಿ ಇರತಕ್ಕಂಥ ಹಣವೇನಿದೆಯೋ, ಅದನ್ನೆಲ್ಲಾ ಹೊಂದಿಸಿ 2–3ತಿಂಗಳುಗಳಲ್ಲಿ ಕೊಡುತ್ತೇವೆ. ಅದನ್ನು ಕೊಡತಕ್ಕಂಥದ್ದು ನಮ್ಮ ಜವಾಬ್ದಾರಿ,

ಎಂದು ಅವರು ಅಷ್ಟೊಂದು ಸ್ಪಷ್ಟವಾಗಿ ಹೇಳಿದರೂ ಸಹ, ನೀವು ಗಲಾಟೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಅದು ಹಾಗಲ್ಲ. ಈಗ ಪರಿಸ್ಥಿತಿ ಏನಾಗಿದೆ ಎಂದರೆ.....

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವೇ ಹೇಳಿ, ಈ ಮನೆಯಲ್ಲಿ ಚರ್ಚೆಯಾಗಿ ಸರ್ಕಾರ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಅನ್ನು ನೇಮಕ ಮಾಡಿತು. ನಾವು ಕೆಲಸಗಳನ್ನು ಮಾಡಿಸಿ ಎರಡು ತಿಂಗಳು ಕಳೆದು ಹೋಗಿದೆ. ಆ ಬಿಲ್ಲುಗಳನ್ನು ತತ್‌ತಕ್ಷಣ ಪಾವತಿ ಮಾಡಿ ಎಂದು ಕೇಳುತ್ತಿದ್ದೇವೆ. ಅದನ್ನು ಕೊಡುವುದಕ್ಕೆ ಇನ್ನೂ 2–3 ತಿಂಗಳಾಗುತ್ತದೆ ಎನ್ನುವುದಾದರೆ, ಆ ಕೆಲಸ ಮಾಡಿದಂತಹ ನಮ್ಮಗಳಿಗೆ ಗೌರವ ಬರುತ್ತದೆಯೇ? ನಾವೇನಾದರೂ ಬಿಕ್ಷೆ ಕೇಳುತ್ತಿದ್ದೇವೆಯೇ? ಕುಡಿಯುವ ನೀರಿನ ಹಾಹಾಕಾರ ಇದ್ದಾಗ, ಶಾಸಕರು ಜವಾಬ್ದಾರಿಯನ್ನು ತೆಗೆದುಕೊಂಡು, ಟಾಸ್ಕ್‌ಫೋರ್ಸ್‌ನಲ್ಲಿ ಮಂಜೂರಾತಿ ಮಾಡಿ, ಆ ಕೆಲಸವನ್ನು ಮಾಡಿಸಿ, ಆ ಬೋರ್‌ವೆಲ್ ಕೊರೆದವನಿಗೆ, ಆ ಕೆಲಸಗಳನ್ನು ಮಾಡಿದವನಿಗೆ, ಬಿಲ್‌ಗಳು ಪಾವತಿಯಾಗಿಲ್ಲ ಎನ್ನುವುದಾದರೆ, ನಾಳೆ ಇನ್ನು 3 ತಿಂಗಳು ಟಾಸ್ಕ್‌ಫೋರ್ಸ್ Extend ಮಾಡಿ ಅಲ್ಲಿ ಕೆಲಸ ಮಾಡಿಸಬೇಕು ಎಂದು ತೀರ್ಮಾನವನ್ನೇನಾದರೂ ನಾವು ತೆಗೆದಕೊಂಡರೆ, ಅಲ್ಲಿ ಯಾರಾದರೂ ಬಂದು ಕಾಮಗಾರಿಗಳನ್ನು ಕೈಗೊಳ್ಳುತ್ತಾರೆಯೇ? ಅದಕ್ಕೆ ಗೌರವ ಬರುತ್ತದೆಯೇ? ಯಾವ ಕೆಲಸಗಳಾಗಿವೆಯೋ, ಅದಕ್ಕೆ ತಕ್ಷಣ ಪೇಮೆಂಟ್ ಮಾಡುತ್ತೇವೆ ಎಂದು ಹೇಳುವುದಕ್ಕೆ ನಿಮಗೇನು ತೊಂದರೆ? ನಮ್ಮ ಹತ್ತಿರ ದುಡ್ಡಿದೆ ಎಂದು ಹೇಳುತ್ತೀರಿ, ನಾವು ಕೆಲಸ ಮಾಡಿಸಿರುವುದಕ್ಕೆ ಪೇಮೆಂಟ್ ಮಾಡಿ ಎಂದರೆ, ಅದಕ್ಕೇಕೆ 2–3 ತಿಂಗಳು ಬೇಕು ಎನ್ನುತ್ತೀರಿ? ನಮ್ಮ ಮರ್ಯಾದೆ ಏನಾಗಬೇಕು?

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ದಯಮಾಡಿ ಕುಳಿತುಕೊಳ್ಳಿ. ಒಬ್ಬೊಬ್ಬರೇ ಮಾತನಾಡುವುದಕ್ಕೆ ನಾನು ಪದೇ ಪದೇ ಅವಕಾಶ ಕೊಡುವುದಿಲ್ಲ. ಮಾನ್ಯ ಯಡಿಯೂರಪ್ಪನವರೆ ತಾವು ನಿಲುವಳಿ ಸೂಚನೆ ತಂದಿದ್ದಿರಿ. ನಾನು ಅದು ಮುಕ್ತಾಯವಾಗಿದೆ ಎಂದು ಹೇಳಿದ್ದೇನೆ. ಮಾನ್ಯ ಸತ್ಯನಾರಾಯಣರವರೆ, ನೀವು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ವಿರೋಧ ಪಕ್ಷದ ನಾಯಕರುಗಳ ಮುಖಂಡರ ಸಭೆಯೊಂದನ್ನು ಕರೆದು, ಅವರೇನು ಎಲ್ಲೆಲ್ಲಿ ಪೇಮೆಂಟ್ ಆಗಬೇಕು ಎಂದು ಹೇಳುತ್ತಾರೆ, ಅದನ್ನೆಲ್ಲಾ ಮಾಡುವುದಕ್ಕೆ ಸೆಪರೇಟಾಗಿ ಮೀಟಿಂಗ್ ಒಂದನ್ನು ಮಾಡಬೇಕು.

ಶ್ರೀ ಬಿ. ಸತ್ಯನಾರಾಯಣ: ಆಯಿತು ಸಾರ್. ಆಗಬಹುದು.

(ಈ ಹಂತದಲ್ಲಿ ಶ್ರೀಮತಿ ನಾಗಮಣಿ ನಾಗೇಗೌಡರವರು ಸಹ ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು.)

ಶ್ರೀ ಬಿ.ಎಸ್. ಯಡಿಯೂರಪ್ಪ: ಕಾಮಗಾರಿ ಆಗಿರುವುದಕ್ಕೆ ದುಡ್ಡು ಕೊಡುವುದಕ್ಕೆ ಹೇಳಿ. ಮೀಟಿಂಗ್ ಅನ್ನು ನಾವು ಮಾಡೋಣ. ಇದುವರೆಗೆ ಏನು ಕಾಮಗಾರಿ ಆಗಿದೆ ಈ ಸದನ ಮುಗಿಯುವುದರೊಳಗಾಗಿ ಅವುಗಳಿಗೆ ಪೇಮೆಂಟ್ ಮಾಡುತ್ತೇವೆಂದು ಹೇಳಿ. ಈಗಿರುವ ಕಾಮಗಾರಿಗೆ ಪೇಮೆಂಟ್ ಮಾಡುವುದಕ್ಕೆ ಏನು ತೊಂದರೆ ಇದೆ?

ಅಧ್ಯಕ್ಷರು: ಸರ್ಕಾರ ಎಂದು ಇದ್ದ ಮೇಲೆ ಇಷ್ಟೇ ದಿವಸದಲ್ಲಿ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಪೇಮೆಂಟ್ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ. ಸತ್ಯನಾರಾಯಣ: ಪೇಮೆಂಟ್ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮೊನ್ನೆ ಶಿವಮೊಗ್ಗ ಜಿಲ್ಲಾ ಪಂಚಾಯತ್ ಮೀಟಿಂಗ್‌ಗೆ ಹೋಗಿದ್ದೆ. ಮುಖ್ಯ ಕಾರ್ಯದರ್ಶಿಗಳ ಹತ್ತಿರ ಏನಾಗಿದೆ ಎಂದು ಕೇಳಿದ್ದಕ್ಕೆ ಅವರು ಹೇಳುತ್ತಾರೆ, ಸರ್ಕಾರದಿಂದ ನಮಗೆ ಏನೂ ಹಣ ಬಂದಿಲ್ಲ ಎಂದು ಬಂದರೆ ನಾವು ಖಂಡಿತ ಬಿಡುಗಡೆ ಮಾಡುತ್ತೇವೆಂದು ಅವರು ಹೇಳಿದರು. ಇಲ್ಲಿ ವಿಧಾನ ಸಭೆಯಲ್ಲಿ ಕಳೆದ ಅಧಿವೇಶನದಲ್ಲಿ ಕೇಳಿದಾಗ ಕುಡಿಯುವ ನೀರಿಗೆ ನಿಮಗೆ ಎಷ್ಟು ಬೇಕಾದರೂ ದುಡ್ಡು ಕೊಡುತ್ತೇನೆ, ಪ್ರಶ್ನೆ ಇಲ್ಲ, ಅಲ್ಲಿಂದ ಪ್ರಪೊಸಲ್ ಬಂದರೆ ಸಾಕು ಎಂದು

ಇವರು ಹೇಳುತ್ತಾರೆ. ಅವರು ನಮಗೆ ಹಣ ಬಂದಿಲ್ಲವೆಂದು ಹೇಳುತ್ತಾರೆ. ಅಧ್ಯಕ್ಷರೆ ನಾವು ಯಾರ ಹತ್ತಿರ ಕೇಳಬೇಕು ನೀವೇ ಹೇಳಿ.

ಅಧ್ಯಕ್ಷರು: ಈಶ್ವರಪ್ಪನವರೇ, ನಿಮ್ಮ ಎದುರಿಗೇ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು: ಶಾಸಕರ ಕ್ಷೇತ್ರಗಳಲ್ಲಿ ಬೋರ್‌ವೆಲ್‌ಗಳು ಮಾಡಬೇಕು. ಬಾವಿಗಳು ಮಾಡಬೇಕೆಂದು ಕೊಟ್ಟರೆ ಅಲ್ಲಿಯ ಸಿಇಒರವರು ಹಸ್ತಕ್ಷೇಪ ಮಾಡಿ ಅವುಗಳನ್ನೆಲ್ಲಾ ನಿಲ್ಲಿಸಿ ಅವರದ್ದೇ ಅಧಿಕಾರವನ್ನು ಅಮಲು ಮಾಡುವ ಕೆಲಸ ಮಾಡಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು? ಈ ಸದನದಲ್ಲಿ ತಾವು ಗೌರವದಿಂದ ಟಾಸ್ಕ್‌ಫೋರ್ಸ್ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ನೀವು ಪಟ್ಟಿ ಮಾಡಿಕೊಡಿ ಎಂದು ಹೇಳಿರುವಾಗ ನಾವು ಏನು ಹೇಳುವುದು? ಕೆಲಸ ಮಾಡಿ ಮೂರು ನಾಲ್ಕು ತಿಂಗಳುಗಳೂ ಕಳೆದೆವು. ಇದಕ್ಕೆಲ್ಲಾ ಯಾರು ಜವಾಬ್ದಾರರು?

ಅಧ್ಯಕ್ಷರು: ಈಗ ನೀವು ಬೇರೆ ವಿಷಯಗಳನ್ನು ತೆಗೆದುಕೊಂಡು ಸಭೆ ನಡೆಸುವುದಕ್ಕೆ ಇಷ್ಟ ಇದ್ದರೆ ಮಾಡಿ. ಇಲ್ಲದಿದ್ದರೆ ನಾನು ಸದನವನ್ನು ನಾಳೆಗೆ ಅಡ್ಜರ್ನ್ ಮಾಡಿ ಹೊರಟು ಹೊಗುತ್ತೇನೆ ಅಷ್ಟೆ. ಈ ತರಹ ಆದರೆ ನಾವು ಸದನ ನಡೆಸುವುದಕ್ಕಾಗುವುದಿಲ್ಲ. ಈಶ್ವರಪ್ಪನವರೇ, ಯಡಿಯೂರಪ್ಪನವರೇ, ಕೇಳಿ ಡಿಮಾಂಡ್ ಮೇಲೆ ಾಲ್ಕನೇ ದಿನ ಆದರೂ ಇನ್ನು ಸರಿಯಾಗಿ ಚರ್ಚೆ ಪ್ರಾರಂಭವಾಗಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಡಿಮಾಂಡ್‌ನಿಂದ ರೆಮಿಡಿಸ್ ಇಲ್ಲ. ಕುಡಿಯುವುದಕ್ಕೆ ನೀರೇ ಇಲ್ಲದೆ ಇದ್ದಾಗ ಏನು ಚರ್ಚೆ ಮಾಡುತ್ತೀರಿ? ಹಳ್ಳಿಗಳಿಗೆ ಹೋಗಿ ನಾವು ಉತ್ತರ ಕೊಡುವುದಕ್ಕಾಗುವುದಿಲ್ಲ. ದುಡ್ಡು ಕೊಡುತ್ತಾರೆಯೇ ಅಥವಾ ಇಲ್ಲವೆಂದು ಹೇಳಿಬಿಡಲಿ.

ಅಧ್ಯಕ್ಷರು: ಸತ್ಯನಾರಾಯಣರವರೇ ಏನಾಗಿದೆ ಎಂದರೆ, ಶಾಸಕರು, ಎಲ್ಲಾ ಪಕ್ಷಗಳ ಮುಖಂಡರು.....

ಶ್ರೀ ಬಿ. ಸತ್ಯನಾರಾಯಣ: ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲಹೆ ಕೊಡುತ್ತೇನೆ. ಈಗ ಏನು ಗೊಂದಲ ಇದೆ ಸಿಇಒಗಳು ಹಣ ಕೊಡುತ್ತಿಲ್ಲವೆನ್ನುವ ವಾತಾವರಣ ಇದೆ ಎಂದು ಇವರು ಹೇಳುತ್ತಿದ್ದಾರೆ. ನಾನು ಸಿಇಒಗಳ ಸಭೆಯನ್ನು ಈ ವಾರದಲ್ಲಿ ಕರೆದು ಬಾಕಿ ಎಷ್ಟು ಇದೆ, ಎಷ್ಟು ಕೊಡಬೇಕು,

ಯಾವ ರೀತಿ ಕೊಡಬಹುದು, ಯಾವ ರೀತಿ ಕೊಡಬೇಕೆಂಬ ಬಗ್ಗೆ ನಾನು ಚರ್ಚೆ ಮಾಡಿ ಸೂಕ್ತ ಆದೇಶ ನೀಡಿ ಅವರಿಗೆ ದುಡ್ಡು ಕೊಡಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಸತ್ಯನಾರಾಯಣರವರೇ.... ಅವರಿಗೆ ಯಾರಿಗೂ ಉತ್ತರ ಕೊಡಬೇಡಿ. Nothing will go on record. ಏನಿದು ತಮಾಷೇನಾ? ಯಾವುದೂ ಕಡತಕ್ಕೆ ಹೋಗುವುದು ಬೇಡಾ. ನೀವು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯದರ್ಶಿಗಳನ್ನು ಕರೆಯುವುದಕ್ಕೆ ಮೊದಲು ಶಾಸಕರು, ವಿರೋಧ ಪಕ್ಷಗಳ ಬೇರೆ ಬೇರೆ ಪಕ್ಷದ ಮುಖಂಡರು ಮತ್ತು ಇನ್ನಿತರ ಮುಖಂಡರು ಎಲ್ಲರ ಸಭೆ ಕರೆದು ಅವರ ಸಮಸ್ಯೆಗಳು ಏನು ಎಂದು ಡೀಟೇಲ್ ಆಗಿ ತಿಳಿದುಕೊಂಡು ಆನಂತರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯದರ್ಶಿಗಳಿಗೆ ಕರೆದು ಅದಕ್ಕೆ ಒಂದು ಇಮ್ಮೀಡಿಯಟ್ಟಾಗಿ ಪರಿಹಾರವನ್ನು ಒದಗಿಸುವುದು ನಿಮ್ಮ ಜವಾಬ್ದಾರಿ. ಅದನ್ನು ಸದನಕ್ಕೆ ರಿಪೋರ್ಟ್ ಮಾಡಬೇಕು. ದಯಮಾಡಿ ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಬಿ. ಸತ್ಯನಾರಾಯಣ: ಆಗಬಹುದು.

ಅಧ್ಯಕ್ಷರು: ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಉದಾಸಿಯವರೇ ಇದನ್ನೇ ಎಷ್ಟು ಹೊತ್ತು ಮಾತನಾಡುತ್ತೀರಿ?

ಶ್ರೀ ಸಿ.ಎಂ ಉದಾಸಿ: ಈಗ ಬರ ಪರಿಹಾರದ ಹಣದಲ್ಲಿ ಕೊಳವೆ ಬಾವಿಗಳನ್ನು ತೆಗೆಸುತ್ತೇವೆಂದು ಹೇಳಿದ್ದಿರಿ. ಆದರೆ ಕೊಳವೆ ಬಾವಿಗಳನ್ನು ತೆಗೆಸಿದ್ದಕ್ಕೆ ಹಣ ಬಿಡುಗಡೆ ಮಾಡುವುದಕ್ಕೆ ಜಿಲ್ಲಾಧಿಕಾರಿಗಳ ಹತ್ತಿರ ಹಣ ಇಲ್ಲ, ಕಳೆದ ಒಂದು ತಿಂಗಳಿಂದ ಹಣ ಬಿಡುಗಡೆ ಮಾಡಿಲ್ಲ. 1.90 ಕೋಟಿ ಲಕ್ಷ ರೂಪಾಯಿ ಹಣ ಬೇಕಾಗಿದೆ. ಹಾವೇರಿ ಜಿಲ್ಲೆ ಒಂದು ಕಡೆ 1.90 ಕೋಟಿ ಲಕ್ಷ ರೂಪಾಯಿ ಹಣ ಬೇಕೆಂದು ಕೇಳಿದಾಗ ಕೊಡಲಿಲ್ಲ ಬಾಕಿ ಮೂರು ಕೋಟಿ ರೂಪಾಯಿಗಳಷ್ಟು ಹಣ ಬರಬೇಕಾಗಿದೆ. ಜಿಲ್ಲಾದಿಕಾರಿಗಳ ಕಾರ್ಯಾಲಯಗಳಿಗೆ ಇವತ್ತಿನವರೆಗೆ ಹಣ ಬಿಡುಗಡೆ ಆಗಲಿಲ್ಲ.

ಶ್ರೀ ಬಿ ಸತ್ಯನಾರಯಣ: ಮೂರು ದಿವಸಗಳ ಕೆಳಗೆ 909ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರ ಬರಗಾಲ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿದ್ದೇವೆ. ಅದು ಇನ್ನೂ ತಲುಪಿಲ್ಲ. ಅದು ಬರಗಾಲದ ಹಣ ಕೂಡ ಪ್ರೊಸೀಜರ್‌ನಲ್ಲಿಯೇ ಹೋಗಬೇಕು.

ಅಧ್ಯಕ್ಷರು: ಏನೇನು ಇದೆ ಏನೇನು ಆಗಬೇಕು ಇದರ ಬಗ್ಗೆ ಮಂತ್ರಿಗಳ ಒಂದು ಮೀಟಿಂಗ್ ಕರೆಯುತ್ತಾರೆ. ದಯಮಾಡಿ ಅಲ್ಲಿ ತಿಳಿಸಿ. ಅದಾದ ಮೇಲೆ ಅಧಿಕಾರಿಗಳ ಸಭೆ ಕರೆದು ಅವರು ಕ್ರಮ ತೆಗೆದುಕೊಳ್ಳುತ್ತಾರೆ. ಆಮೇಲೆ ಈ ಸಭೆಗೆ ಅವರು ವರದಿಯನ್ನು ಕೊಡುತ್ತಾರೆ. ದಯಮಾಡಿ ಸಹಕರಿಸಿ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸತ್ಯನಾರಯಣರವರು ಹೇಳಿದ ಹಾಗೆ ಹಣದ ಕೊರತೆ ಕೆಲವು ಜಿಲ್ಲೆಗಳಲ್ಲಿ ಇದೆ. ಆದರೆ ಸರ್ಕಾರ ಕುಡಿಯುವ ನೀರಿಗೆ ಎಷ್ಟು ಹಣ ಬೇಕಾದರೂ ಕೊಡುವುದಕ್ಕೆ ಸಿದ್ದ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಕೇಳಿ ಕೇಳಿ ಸಾಕಾಗಿದೆ. ನೀವು ಹೇಳುತ್ತಿರುವುದು ಎಲ್ಲಾ ಬರೀ ಸುಳ್ಳು.

(ಗೊಂದಲ)

(ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಿದರು)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಹಣ ಕೊಡಬೇಕಾಗಿರುವುದನ್ನು ಅವರು ಹೇಳುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೂಡ ಕಷ್ಟ ಇದೆ. ಮೊನ್ನೆ ನಾನು ಕೂಡ ಮೀಟಿಂಗ್ ಮಾಡಿದ್ದೆ. ಆ ಮೀಟಿಂಗ್‌ನಲ್ಲಿ ಮಾನ್ಯ ಶ್ರೀ ರಾಮರೆಡ್ಡಿಯವರೂ ಇದ್ದರು. ಆ ಮೀಟಿಂಗ್‌ನಲ್ಲಿ ಮೂರು ಕೋಟಿ ರೂಪಾಯಿ ಹಣ ಬರುತ್ತದೆ ಎಂದು ಹೇಳಿದ್ದಾರೆ. ಅದು ಇವತ್ತು ನಾಳೆ ಬಂದು ತಲುಪುತ್ತದೆ, ನೀವು ಈಗಲೇ ಕೊಡಿ ಎಂದು ಹೇಳಿದರೆ ಆಗುವುದಿಲ್ಲ. ಕುಡಿಯುವ ನೀರಿಗೆ ಯಾವುದೇ ಪರಿಸ್ಥಿತಿಯಲ್ಲಿ ಹಣ ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ನಮಗೆ ಬರೇ ಉತ್ತರ ಬೇಡ. ನೀರಿಗೆ ದುಡ್ಡು ಕೊಡಬೇಕು.

ಶ್ರೀ ಹೆಚ್.ಡಿ. ಬಸವರಾಜು: ಹಣ ಬೇಕಾದಷ್ಟು ಇದೆ ಎಂದು ತಾವು ಹೇಳುತ್ತಿದ್ದಿರಿ. ಎಷ್ಟು ಇದೆ ಎಂದು ಹೇಳಿ. ಎಚ್ಚು ವಿತರಗೆ ಮಾಡಿದ್ದೇವೆಂದಾದರೂ ಹೇಳಿ.

ಅಧ್ಯಕ್ಷರು: ಈಗ ನಿರ್ಣಯ, ಯಡಿಯೂರಪ್ಪನವರೆ,ೀ ನೀವು ನಿರ್ಣಯ ತಂದಿದ್ದೀರಿ ಅದರ ಬಗ್ಗೆ...

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರು ವೆಲ್‌ನಲ್ಲಿರುವಾಗ ತೆಗೆದು ಕೊಳ್ಳುವುದು ಬೇಡ. ತಾವೆಲ್ಲಾ ತಮ್ಮ ಸ್ಥಳಗಳಿಗೆ ಬನ್ನಿ.

ಶ್ರೀ ಕೆ.ಎಸ್. ಈಶ್ವರಪ್ಪ: ಸರ್ಕಾರದಿಂದ ಬೇಜವಾಬ್ದಾರಿ ಉತ್ತರ ಬರುತ್ತಿದೆ. ಕುಡಿಯುವ ನೀರಿಗೆ ದುಡ್ಡು ಕೊಡುತ್ತಿಲ್ಲ. ಕಳೆದ ವಿಧಾನ ಸಭೆ ಅಧಿವೇಶನದಲ್ಲಿ ಕೂಡ ಇದೇ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ಈಶ್ವರಪ್ಪನವರೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ನಿಮ್ಮನ್ನು ಮೀಟಿಂಗ್‌ಗೆ ಕರೆಯುತ್ತಾರೆ, ಎಲ್ಲಾ ಸಮಾಚಾರಗಳನ್ನು ತಿಳಿದುಕೊಂಡು ಆನಂತರ ಅಧಿಕಾರಿಗಳನ್ನು ಭೇಟಿ ಆಗಿ ಸೂಕ್ತ ನಿರ್ದೇಶನ ಕೊಟ್ಟು ಮತ್ತೆ ಇಲ್ಲಿ ರಿಪೋರ್ಟ್ ಮಾಡುತ್ತಾರೆ. ಅದಕ್ಕಿಂತ ಹೆಚ್ಚಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ತಾವೆಲ್ಲಾ ಕುಳಿತುಕೊಂಡು ಸಹಕರಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಇದೇ ಉತ್ತರ ಕಳೆದ ಅಧಿವೇಶನದಲ್ಲೂ ಕೂಡ ಸಿಕ್ಕಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಈಗಲೇ ಕೊಡಿ, ನಾಳೆ ಕೊಡಿ ಎಂದು ಹೇಳುತ್ತಿಲ್ಲ. ನಾವು ಇಷ್ಟೇ ಹೇಳಿರುವುದು. ನೀವೆಲ್ಲಾ ಸರ್ಕಾರದವರು ಒಟ್ಟಿಗೆ ಕೂತು ನಿರ್ಣಯ ಮಾಡಿ ನಮ್ಮನ್ನು ಟಾಸ್ಕ್‌ಫೋರ್ಸ್‌ಗೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ನಾವು ಕೆಲಸ ಮಾಡಿದ್ದೇವೆ. ಮತ್ತು ಸೂಚನೆ ಕೊಟ್ಟ ಹಾಗೆ, ಮಂಜೂರು ಮಾಡಿದ ಹಾಗೆ, ಬೋರ್‌ವೆಲ್ ಮತ್ತೊಂದು ಅಧಿಕಾರಿಗಳ ಸಮಕ್ಷಮ ಮಾಡಿ ಮಂಜೂರಾತಿ ಆಗಿ ಕೆಲಸಗಳೂ ಆಗಿ ಇಷ್ಟು ತಿಂಗಳು ಕಳೆದರೂ ಹಣ ಪಾವತಿ ಆಗಿಲ್ಲ. ಹಣ ಪಾವತಿ ಮಾಡಬೇಕಾದರೆ ಹಿಂದೆ ಚರ್ಚೆಯಾದಾಗ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ವಾಟಾಳ್ ನಾಗರಾಜ್‌ರವರಿಂದ ಹಿಡಿದು ನಾವೆಲ್ಲಾ ಒಕ್ಕೊರಲಿನಿಂದ ಕೇಳಿದ್ದು ಒಂದೊಂದು ಕೋಟಿ ರೂಪಾಯಿ ನೀವು ಕೊಡಬೇಕು. ಇಲ್ಲದಿದ್ದರೆ ನೀವು ಕುಡಿಯುವ ನೀರಿನ ಹಾಹಾಕಾರವನ್ನು ಬಗೆಹರಿಸುವುದಕ್ಕಾಗುವುದಿಲ್ಲ ಎಂದು ಹೇಳಿದೆವು. ಇವತ್ತು ಸಹ ಕೆಲವು ಕಡೆ ಕುಡಿಯುವ ನೀರಿನ ಹಾಹಕಾರ ಇರುವುದು ತಮಗೆಲ್ಲಾ ಗೊತ್ತಿರುವಂಥಾದ್ದು. ಸಹ ಮುಖ್ಯಮಂತ್ರಿಗಳು ಇವತ್ತು ಗುಲ್ಬರ್ಗಾದಲ್ಲಿ ಬರಗಾಲ ಎದುರಿದುತ್ತಿದ್ದೇವೆ, ಒಂದು ಹನಿ ನೀರೂ ಇಲ್ಲವೆಂದು ಹೇಳಿದರು. ನಾವು ಸರ್ಕಾರಕ್ಕೆ ಇಷ್ಟೇ ವಿನಂತಿ ಮಾಡುವುದು, ದಯಮಾಡಿ ಜವಾಬ್ದಾರಿಯಿಂದ

ಉತ್ತರ ಕೊಡಬೇಕು. ಈ ಕಡೆ ಕೂತಿರುವಂತಹ ವಿರೋಧ ಪಕ್ಷದ ಸದಸ್ಯರುಗಳು ಪ್ರಸ್ತಾಪ ಮಾಡಿದಾಗ ಬೇಕಾದಷ್ಟು ದುಡ್ಡು ಇದೆ ಎಂದು ಒಂದು ಕಡೆ ಹೇಳುವುದು, ಯಾರು ಕೆಲಸ ಮಾಡಿದ್ದಾರೆ ಅವರಿಗೆ ಹಣ ಪಾವತಿ ಮಾಡಿ ಎಂದು, ಬಿಡುಗಡೆ ಮಾಡಿ ಎಂದು ಹೇಳಿದರೆ ಬೇರೆ ಸ್ಕೀಂನಲ್ಲಿ ಇರುವ ಹಣ ನಿಮಗೆ ಕೊಡುವುದಕ್ಕಾಗುವುದಿಲ್ಲವೆಂದು ಜಿಲ್ಲಾ ಪಂಚಾಯಿತಿ ಚೀಫ್ ಸೆಕ್ರೆಟರಿಯವರು ಹೇಳುತ್ತಾರೆ. ಬೇರೆ ಸ್ಕೀಂಗಳಲ್ಲಿ ಇರುವುದು ಹೇಗೆ ಕೊಡುವುದಕ್ಕೆ ಬರುತ್ತದೆ. ಇಲ್ಲಿ ಅಧಿಕಾರಿಗಳ ಕಪಿ ಮುಷ್ಟಿ ಇದೆ. ಎಲ್ಲಿ ಶಾಸಕರು ಸ್ವತಂತ್ರ್ಯವಾಗಿ ಕೆಲಸ ಮಾಡುತ್ತಾರೋ ಎಲ್ಲಿ ಕೆಲವರು ಆಸಕ್ತಿ ಇಲ್ಲದೆ ಇರುವವರು ಅಡ್ಡಿ ಆತಂಕಗಳನ್ನು ಮಾಡಿಕೊಂಡು ಹಣ ಕೊಡದೆ, ನಾವು ಕಳುಹಿಸಿಕೊಡುವ ಕಾಮಗಾರಿಗಳಿಗೂ ಸಹ ಮುಖ್ಯ ಕಾರ್ಯದರ್ಶಿಯವರು ಅದಕ್ಕೆ ಮಂಜೂರಾತಿ ಕೊಡದೆ ಅಡ್ಡಿ ಮಾಡಿಕೊಂಡು ಈ ಪರಿಸ್ಥಿತಿ ಬಂದಿದೆ. ಅವರು ಈಗ ಸ್ಪಷ್ಟವಾಗಿ ಹೇಳಬೇಕು, ಈಗ ಆಗಿರುವ ಕಾಮಗಾರಿಗೆ ದುಡ್ಡು ಕೊಡುತ್ತೇವೆ, ಹೊಸದಾಗಿ ಟಾಸ್ಕ್‌ಫೋರ್ಸ್‌ನಲ್ಲಿ ಏನು ಮೂರು ತಿಂಗಳು ಮುಂದುವರೆದಿದೆ ಅದಕ್ಕೆ ನಾವು ತಕ್ಷಣ ಆಯಾಯ ತಾಲ್ಲೂಕು ಪಂಚಾಯಿತಿಗೆ ಹಣ ಕಳುಹಿಸಿಕೊಡುತ್ತೇವೆ, ಮತ್ತು ಜಿಲ್ಲೆಯಲ್ಲಿ ಅದನ್ನು ಡಿಸ್‌ಪೋಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಸ್ಪಷ್ಟ ಭರವಸೆ ಕೊಡುವವರೆಗೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಸಹ ಅನಿವಾರ್ಯವಾಗಿ ಧರಣಿ ಮಾಡುತ್ತೇವೆ. ನಮಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ: ತಾವು ಧರಣಿ ಮಾಡುವುದಕ್ಕೆ ಮುಂದೆ ನಾನು ಒಂದು ವಿವರಣೆ ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಸಿಂಧ್ಯರವರೇ, ಕಳೆದ ಅಧಿವೇಶನದಲ್ಲಿ ಇದೇ ಉತ್ತರ ಕೊಟ್ಟಿದ್ದಿರಿ. ನಾನು ನಿಮಗೆ ಖಂಡಿತ ಅಡ್ಡಿ ಬರುವುದಿಲ್ಲ. ನಿಮಗೆ ಮನವಿ ಮಾಡುತ್ತೇನೆ, ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಕೊಡಲಿಲ್ಲ ಎಂದರೆ ದಯವಿಟ್ಟು ವಿಷ ಕೊಟ್ಟುಬಿಡಿ. ನಾವು ಹಳ್ಳಿಗಳಿಗೆ ಹೋಗುವುದಕ್ಕಾಗುವುದಿಲ್ಲ. ಹಳ್ಳಿಯ ಜನ ಬೊಂಬಡಿ ಹೊಡೆಯುತ್ತಿದ್ದಾರೆ. ಬರೇ ಉತ್ತರವನ್ನು

ತೆಗೆದುಕೊಂಡು ನಾವು ಏನು ಮಾಡುವುದು? ನಮಗೆ ಕುಡಿಯುವುದಕ್ಕೆ ನೀರು ಕೊಡಿ.

ಅಧ್ಯಕ್ಷರು: ಈ ನಿಲುವಳಿ ಸೂಚನೆ ಮುಕ್ತಾಯವಾಗಿದೆ ಎಂದು ನಾನು ಹೇಳಿದ ಮೇಲೆ ಮತ್ತು ಸ್ಪಷ್ಟವಾಗಿ ಸೂಚನೆ ಕೊಡಿ ಎಂದು ಹೇಳಿದ್ದಕ್ಕೆ ಅವರು ಒಪ್ಪಿಕೊಂಡರು. ಈ ತರಹ ಆದರೆ ಈ ಸಭೆ ನಡೆಸುವುದು ಕಷ್ಟವಾಗುತ್ತದೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ...

ಅಧ್ಯಕ್ಷರು: ಯಡಿಯೂರಪ್ಪನವರೇ, ಇದು ಮುಕ್ತಾಯ ಆಗಿದೆ ಎಂದು ಹೇಳಿ ನಂತರ ನೀವು ಆ ವಿಚಾರ ಎತ್ತಿದಿರಿ. ನಾನು ಇದನ್ನು ಮುಕ್ತಾಯ ಮಾಡಿದ್ದೇನೆ ಎಂದು ಹೇಳಿದ್ದೇನೆ. ಅದಾದ ಮೇಲೆ ಅವರು ನಿಂತುಕೊಂಡು ಹೇಳಿದರು ದಯಮಾಡಿ ನಮ್ಮ ಮಾತನ್ನು ಕೇಳಿ. ನಾನು ಅವರಿಗೆ ಸೂಚನೆ ಕೊಟ್ಟೆ, ಈ ಎಲ್ಲ ಶಾಸಕರ ಸಭೆ ಕರೆದು ಅದಾದ ಮೇಲೆ ಅಧಿಕಾರಿಗಳ ಸಭೆ ಕರೆಯಿರಿ, ಆದಾದ ಮೇಲೆ ಈ ಸದನಕ್ಕೆ ಒಂದು ರಿಪೋರ್ಟ್ ಮಾಡಿ ಎಂದು ಹೇಳಿದ ಮೇಲೆ ಈ ತರಹ ಕಪಿಮುಷ್ಟಿ ಹಿಡಿದುಕೊಂಡು ಸುಮ್ಮನೆ ಗಲಾಟೆ ಮಾಡಿದರೆ ಸಭೆಯನ್ನು ಏನು ನಡೆಸುವುದು ಹೇಳಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಣ್ಣ ಕೈಗಾರಿಕೆ ಮತ್ತು ಮೂಲಸೌಲಭ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಎರಡು ವಿಚಾರಗಳನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಜಿ.ವಿ. ಶ್ರೀರಾಮರೆಡ್ಡಿ ಯವರು ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿಯವರು, ಶ್ರೀಮತಿ ನಾಗೇಗೌಡರು ಎಲ್ಲಾ ಧರಣಿ ಮಾಡುತ್ತಿರುವುದರಿಂದ ಈ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ನಾನು ಎದ್ದು ನಿಂತಿದ್ದೇನೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಇದಕ್ಕೆ ಸಾಕಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ ಅದರಿಂದ ಅವರಿಗೆ ತೃಪ್ತಿಯಾಗಿಲ್ಲ. ಮತ್ತು ಕೋಲಾರ ಜಿಲ್ಲೆಯ ಉಸ್ತುವಾರಿ ಮಂತ್ರಿ ಹಾಗೂ ಕೃಷಿ ಸಚಿವರಾದ ಶ್ರೀನಿವಾಸಗೌಡರು ಕೂಡ ಮಾತನಾಡಿ ಕುಡಿಯುವ ನೀರಿನ ಸಮಸ್ಯೆ ಇರತಕ್ಕಂಥದ್ದರ ಬಗ್ಗೆ ಹಾಗೂ ಬಿಲ್‌ಗಳು ಪೆಂಡಿಂಗ್ ಇರತಕ್ಕಂಥದ್ದರ ಬಗ್ಗೆ ಸದನದ ಗಮನಕ್ಕೆ ತಂದಿದ್ದಾರೆ. ನಾವೂ ಕೂಡ ರಿವ್ಯೂ ಮಾಡಿದಂಥ ಸಂದರ್ಭದಲ್ಲಿ ಈ ಸಮಸ್ಯೆ ಕೆಲವು ಜಿಲ್ಲೆಗಳಲ್ಲಿ ಮಾತ್ರವಲ್ಲ, ಹಲವಾರು

ಜಿಲ್ಲೆಗಳಲ್ಲಿ ಈ ರೀತಿ ಇರತಕ್ಕಂಥದ್ದು ನಮ್ಮ ಗಮನಕ್ಕೂ ಕೂಡ ಬಂದಿದೆ. ಈಗ ವಾಸ್ತವಾಂಶದಲ್ಲಿ ಈ ಕುಡಿಯುವ ನೀರಿನ ವಿಚಾರದಲ್ಲಿ ಎಂದು ಈ ಜೂನ್ ತಿಂಗಳ ಒಳಗಡೆ ಸುಮಾರು 119 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿರತಕ್ಕಂಥದ್ದರ ಬಗ್ಗೆ ಹೇಳುವಾಗ ಈ ಸದನದಲ್ಲಿ ಕುಳಿತುಕೊಂಡು ನಾವು ಸುಳ್ಳು ಅಂಕಿ ಅಂಶಗಳನ್ನು ಹೇಳುವುದಕ್ಕೆ ಆಗುವುದಿಲ್ಲ. 2005–2006ನೇ ಸಾಲಿಗೆ 130 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿರತಕ್ಕಂಥದ್ದರ ಬಗ್ಗೆ ಮತ್ತು ಜಿಲ್ಲಾವಾರು ಮಾಹಿತಿಗಳಿರುವುದನ್ನು ಕೂಡ ಈ ಸದನದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮೂರು ದಿನಗಳ ಹಿಂದೆ ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟಿಗೆ 80 ಲಕ್ಷ ರೂ, ರೂರಲ್ ಡಿಸ್ಟ್ರಿಕ್ಟಿಗೆ 30 ಲಕ್ಷ ರೂ, ಕೋಲಾರ ಜಿಲ್ಲೆಗೆ 300 ಲಕ್ಷ ರೂ, ತುಮಕೂರು ಜಿಲ್ಲೆಗೆ 95 ಲಕ್ಷ ರೂ, ಶಿವಮೊಗ್ಗ ಜಿಲ್ಲೆ 20 ಲಕ್ಷ ರೂ, ಹಾಸನ ಜಿಲ್ಲೆ 60 ಲಕ್ಷ ರೂ, ಕೊಡಗು ಜಿಲ್ಲೆಗೆ 10 ಲಕ್ಷ ರೂ, ದಕ್ಷಿಣ ಕನ್ನಡ ಜಿಲ್ಲೆಗೆ 25 ಲಕ್ಷ ರೂ, ಬೆಳಗಾಂ ಜಿಲ್ಲೆಗೆ 138 ಲಕ್ಷ ರೂ, ಹಾವೇರಿ ಜಿಲ್ಲೆಗೆ 77 ಲಕ್ಷ ರೂ ಮತ್ತು ಉತ್ತರ ಕನ್ನೆಡ ಜಿಲ್ಲೆಗೆ 74 ಲಕ್ಷ ರೂ ಹೀಗೆ ಒಟ್ಟು 909 ಲಕ್ಷ ರೂಪಾಯಿಗಳನ್ನು ಮೂರು ದಿನಗಳ ಹಿಂದೆ ಆರ್ಥಿಕ ಇಲಾಖೆಯವರು ರಿಲೀಸ್ ಮಾಡಿದ್ದಾರೆ. ತಮಗೆ ಗೊತ್ತಿದೆ, ಸರ್ಕಾರದ ವ್ಯವಸ್ಥೆಯಲ್ಲಿ ಅದು ಹೋಗಿ ತಲುಪುವುದಕ್ಕೆ ಸ್ವಲ್ಪ ನಿಧಾನವಾಗುತ್ತದೆ. ಇದನ್ನು ನಾನು ಹೇಳಿದ್ದು 11 ಜಿಲ್ಲೆಗಳಿಗೆ ಸಂಬಂಧಪಟ್ಟಂಥದ್ದು ಇನ್ನು 16 ಜಿಲ್ಲೆಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. 7ನೇ ತಾರೀಖು ಸಾಯಂಕಾಲ ಕ್ಯಾಬಿನೆಟ್ ಮೀಟಿಂಗ್ ಇದೆ. ಆ ಸಂದರ್ಭದಲ್ಲಿ ನಾವೆಲ್ಲಾ ಕುಳಿತುಕೊಂಡು ಇದನ್ನೆಲ್ಲಾ ನೋಡುತ್ತೇವೆ ಮತ್ತು ಟಾಸ್ಕ್‌ಫೋರ್ಸ್‌ಗಳನ್ನು ಕಂಟಿನ್ಯೂ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಈ ಟಾಸ್ಕ್‌ಫೋರ್ಸ್ ಹೇಳಿರತಕ್ಕಂಥ ಬಾಕಿ ಬಿಲ್ ಪೆಂಡಿಂಗ್ ಏನಿದೆ ಅದನ್ನು ಬಿಡುಗಡೆ ಮಾಡುವುದಕ್ಕೆ ನಾವು ಸರ್ಕಾರದಿಂದ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ನಾನು ಸರ್ಕಾರದ ಪರವಾಗಿ ಕೊಡುತ್ತೇನೆ. ದಯಮಾಡಿ ಧರಣಿಯಲ್ಲಿರುವ ಮಾನ್ಯ ಸದಸ್ಯರುಗಳು ಧರಣಿ ಕೈಬಿಡುವ ಮೂಲಕ ನಮಗೆ ಸಹಕಾರ ಕೊಡಬೇಕು. 7ನೇ ತಾರೀಖು ಸಚಿವ ಸಂಪುಟ ಸಭೆ ಇದೆ. ನಾವೆಲ್ಲರೂ ಮಂತ್ರಿಮಂಡಲದಲ್ಲಿ ಕುಳಿತುಕೊಂಡು ಯಾವ ಯಾವ ಬಿಲ್ ಪೆಂಡಿಂಗ್

ಇದೆಯೋ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಅದರಲ್ಲಿಯೂ ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚು ಭಯಂಕರವಾಗಿರತಕ್ಕಂಥಾದ್ದು, ತೊಂದರೆ ಇರತಕ್ಕಂಥಾದ್ದು ನಮ್ಮ ಗಮನಕ್ಕೂ ಬಂದಿದೆ. ನಮ್ಮ ಜಿಲ್ಲೆಯಲ್ಲಿಯೂ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇರುವುದು ನನ್ನ ಗಮನಕ್ಕೂ ಕೂಡ ಬಂದಿದೆ. ಹಣಕಾಸಿನ ಸಚಿವರು, ಮುಖ್ಯಮಂತ್ರಿಗಳು ಮತ್ತು ನಾವೆಲ್ಲರೂ ಸಚಿವ ಸಂಪುಟದಲ್ಲಿ ನಾಡಿದ್ದು 7 ನೇ ತಾರೀಖು ಕುಳಿತುಕೊಂಡು ನಾವು ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ಹಣವನ್ನು ಬಿಡುಗಡೆ ಮಾಡುತ್ತೇವೆ. ನಾವು ಎಷ್ಟು ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂಥದ್ದರ ಬಗ್ಗೆ ಇನ್ನು ಒಂದೆರಡ್ಮೂರು ದಿವಸದಲ್ಲಿ ತಿಳಿಸುತ್ತೇವೆ. ಈ ಸದನ ಮುಂದಿನ ತಿಂಗಳು 5 ನೇ ತಾರೀಖಿನವರೆಗೂ ನಡೆಯುತ್ತದೆ.ಇನ್ನೆರಡ್ಮೂರು ದಿವಸಗಳ ನಂತರ ನಾವು ನಿಮಗೆ ತಿಳಿಸುತ್ತೇವೆ. ದಯಮಾಡಿ ಸಹಕಾರ ಕೊಡಬೇಕೆಂದು ಮಾನ್ಯ ಅಧ್ಯಕ್ಷರೇ ನಾನು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿಬೇಡಿಕೊಳ್ಳುತ್ತೇನೆ. (ತದನಂತರ ಬಾವಿಯಲ್ಲಿ ಧರಣಿನಿರತರಾಗಿದ್ದ ಮಾನ್ಯ ಜೆ.ಸಿ.ಮಾಧುಸ್ವಾಮಿ, ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಜಿ.ವಿ. ಶ್ರೀರಾಮರೆಡ್ಡಿ ಯವರು ಧರಣಿಯನ್ನು ಹಿಂತೆಗೆದುಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಂಡರು.)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ. ಮಹದೇವಪ್ಪನವರೆ, ಪ್ರಕಟಣೆ ಹೇಳಿ.

5. ಮಂತ್ರಿಗಳ ಹೇಳಿಕೆ

ವಿಷಯ: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಕುರಿತು.

ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಆಡಳಿತಾದಿಕಾರಿಗಳನ್ನು ನೆಮಿಸುವ ಕುರಿತು.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರನ್ವಯ 27 ಜಿಲ್ಲಾ ಪಂಚಾಯತಿಗಳಿಗೆ 176 ತಾಲ್ಲೂಕು ಪಂಚಾಯತಿಗಳಿಗೆ ಜೂನ್ 2000